ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).--

ಅ) ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ಅಧಿಕೃತ ಮಾಹಿತಿ ಇಲ್ಲ. ಸದ್ಯದಲ್ಲಿ ಹುಬ್ಬಳ್ಳಿಯಲ್ಲಿ ಕೇಂದ್ರ ವಾರ್ತಾ ಕಛೇರಿಯು ಕೆಲಸ ನಿರ್ವಹಿಸುತ್ತಿರುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಸ್ಪಷ್ಟವಾದ ಯಾವುದೇ ಆದೇಶವೂ ಅವರಿಗೆ ಬಂದಿಲ್ಲವೆಂದು ತಿಳಿದು ಬಂದಿದೆ.

ಆ) ವಾರ್ತಾ ವಿಭಾಗವನ್ನು ಮುಚ್ಚುವುದಾದರೆ, ಇದರಿಂದ ಜನರಿಗೆ ಹಾಗೂ ಪತ್ರಿಕೆಗಳಿಗೆ ಸೌಲಭ್ಯ ನಿಂತು ಹೋಗುವುದು.

ಇ) ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು.

ಬೆಂಗಳೂರಿನಲ್ಲಿ ಸಿಂಥೆಟಿಕ್ ಟ್ರಾಕ್ ನಿರ್ಮಾಣದ ಬಗ್ಗೆ

೪೯೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).--ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಬೆಂಗಳೂರಿನಲ್ಲಿ ಸಿಂಥೆಟಿಕ್ ಟ್ರಾಕ್ ನಿರ್ಮಾಣ ಮಾಡಲು ಕೇಂದ್ರ ಸರ್ಕಾರದ ಯುವಜನ ಕ್ರೀಡಾ ಸಚಿವಾಲಯದವರು ಯೋಜನೆಯನ್ನು ಮಂಜೂರು ಮಾಡಿದ್ದಾರೆಯೇ, ಹಾಗಿದ್ದಲ್ಲಿ ಆ ಯೋಜನೆ ಕಾರ್ಯಗತವಾಗದಿರಲು ಕಾರಣಗಳೇನು ?

೨ ಕೆಂಗೇರಿ ಸಮೀಪದಲ್ಲಿ ದಕ್ಷಿಣ ವಿಭಾಗದ ವಿದ್ಯಾರ್ಥಿ ನಿಲಯದ ಬಳಿ ಈ ಟ್ರಾಕ್ ನಿರ್ಮಾಣಕ್ಕೆ ಅಡ್ಡಿಯಾಗಿರುವುದು ನಿಜವೇ ?

೩ ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

೪ ಈ ಬಗ್ಗೆ ಸರ್ಕಾರ ಕೈಕೊಳ್ಳುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).--

೧ ಹೌದು, ಆದರೆ ರಾಜ್ಯ ಸರ್ಕಾರದ ಪಾಲಿಗೆ (೫೦ ಲಕ್ಷ) ರೂ.ಗಳನ್ನು ಭರಿಸುವುದು ಸಧ್ಯಕ್ಕೆ ಕಷ್ಟವಾದ ಕಾರಣ, ಯೋಜನೆಯನ್ನು ಕಾರ್ಯಗತ ಮಾಡುವುದು ಸಾಧ್ಯವಾಗಿರುವುದಿಲ್ಲ,

೨ ಹೌದು.

೩ ಸದರೀ ಜಮೀನು ಬೆಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುತ್ತದೆ. ಆದ್ದರಿಂದ ಅನುಮತಿ ಬೇಕಾಗುತ್ತದೆ.

೪ ಈ ವಿಷಯದಲ್ಲಿ ವಿಶ್ವವಿದ್ಯಾನಿಲಯವನ್ನು ಜಮೀನು ಬಿಡುಗಡೆ ಮಾಡಲು ಕೋರಲಾಗಿದೆ.

ಬೆಂಗಳೂರು ದೂರದರ್ಶನದಿಂದ ಕಲೆ ಹಾಗೂ ಕಲಾವಿದರನ್ನು ತಾತ್ಸಾರ ಮಾಡುತ್ತಿರುವ ಬಗ್ಗೆ

೧೬೮ (ಬಿ) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).--ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ೧೯೮೫-೮೬ನೇ ಸಾಲಿನಲ್ಲಿ ರಾಜ್ಯದಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ಔಷಧಕ್ಕಾಗಿ ವಿರ್ಚು ಮಾಡಿದ ಹಣವೆಷ್ಟು ? (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

೨) ರಾಜ್ಯದ ಪ್ರತಿಯೊಂದು ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಆಸ್ಪತ್ರೆಗಳಿಗೆ ಕೇವಲ ಮೂರು ತಿಂಗಳು ಮಾತ್ರ ಔಷಧ ಇದ್ದು ವರ್ಷದ ಬಹುಪಾಲು ಅವಧಿಯಲ್ಲಿ ಔಷಧವೇ ಇರುವುದಿಲ್ಲವೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೆ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?